## ಡ್ರೆಸ್ ಮೆಟೀರಿಯಲ್ ಲಭ್ಯ

ಸೀರೆಗಳಲ್ಲದೆ ಡ್ರೆಸ್ ಮೆಟೀರಿಯಲ್, ಕುರ್ತಿಗಳು, ಲೆಹಂಗಾಗಳು, ಫರ್ನಿಶಿಂಗ್‌ಗಳಿಗಾಗಿಯೂ ಪೋಚಂಪಲ್ಲಿ ಪ್ರಸಿದ್ಧ. ಸಾಮಾನ್ಯವಾಗಿ ಹತ್ತಿ, ರೇಷ್ಮೆ, ಹಾಗೂ ಸಿಕೋ (ಹತ್ತಿ ಹಾಗೂ ರೇಷ್ಮೆ) ವಸ್ತ್ರಗಳನ್ನು ಇಲ್ಲಿ ತಯಾರಿಸಲಾಗುತ್ತದೆ. ಪೋಚಂಪಲ್ಲಿ ಉತ್ಪನ್ನಗಳನ್ನು ಸಹಕಾರ ಸಂಘಗಳ ಮೂಲಕ ಮಾರಾಟ ಮಾಡಲಾಗುತ್ತಿದೆಯಾದರೂ 'ಮಾಸ್ಟರ್ ವೀವರ್'ಗಳು ಇಂದಿಗೂ ಮಾರುಕಟ್ಟೆಯನ್ನು /ನೇಕಾರರನ್ನು ನಿಯಂತ್ರಿಸುತ್ತಾರೆ. ಯುನೆಸ್ಕೋದಿಂದ ಜಾಗತಿಕ ಪಾರಂಪರಿಕ ಪಟ್ಟಿಯಲ್ಲಿ ಸ್ಥಾನ ಪಡೆದ ಹೆಮ್ಮೆ ಪೋಚಂಪಲ್ಲಿ ಸೀರೆಗಳಿಗಿದೆ. ಏರ್ ಇಂಡಿಯಾ ಕೂಡ ತನ್ನ ಗಗನ ಸಖಿಯರಿಗಾಗಿ ಈ ಸೀರೆಗಳನ್ನು ಆಯ್ಕೆ ಮಾಡಿದೆ. ಒಟ್ಟಿನಲ್ಲಿ ಟೈಡೈ ತಾಂತ್ರಿಕತೆ ವಸ್ತ್ರ ಉದ್ಯೋಗಕ್ಕೆ ಒಂದು ಹೊಸ ಆಯಾಮ ನೀಡಿ ಪೋಚಂಪಲ್ಲಿ ಬಟ್ಟೆಗಳ ಗ್ರಾಹಕರನ್ನು ಮಂತ್ರ ಮುಗ್ಧ ಗೊಳಿಸಿದೆಯಷ್ಟೇ ಅಲ್ಲ ಸ್ಥಳೀಯ ನೇಕಾರರ ಮುಖದಲ್ಲಿ ಸಂತೃಪ್ತಿಯ ನಗುವನ್ನು ಮೂಡಿಸಿದೆ.



## ಪೋಚಂಪಲ್ಲಿ ಪಟೋಲಾ

ಪೋಚಂಪಲ್ಲಿ ಹಾಗೂ ಸುತ್ತಮುತ್ತಲೂ ತಯಾರಾಗುವ 'ಜೋಡಿ ಇಕತ್' ವಸ್ತ್ರಗಳು ('ಡಬಲ್ ಇಕತ್') ಗುಜರಾತಿನ ಪಟೋಲಾಗಳಿಂದ ಗಾಢವಾಗಿ ಪ್ರೇರಿತವಾಗಿವೆ. ಇಂಥ ವಸ್ತ್ರಗಳನ್ನು 'ಪೋಚಂಪಲ್ಲಿ ಪಟೋಲಾ' ಎಂದೇ ಕರೆಯಲಾಗುತ್ತದೆ. ಪ್ರಸಿದ್ಧ ಪೋಚಂಪಲ್ಲಿ ವಸ್ತ್ರಗಳ ತಯಾರಕ ಗೋವರ್ಧನ್ ಪ್ರಕಾರ ಪೋಚಂಪಲ್ಲಿ ನೇಯ್ಗೆ ಒಂದು ಮಂತ್ರದಂಡವಿದ್ದಂತೆ! ಅದರ ಸ್ಪರ್ಶ ಮಾತ್ರದಿಂದ ಎಂಥದೇ ನೂಲು ರಂಗು ರಂಗಿನ ಸ್ವಪ್ನಸದೃಶ ವಸ್ತ್ರವಾಗಿ ಮಾರ್ಪಡುತ್ತದೆ. ಇಂಥದೊಂದು ಅದ್ಭುತ ರೂಪಾಂತರ ಪೋಚಂಪಲ್ಲಿ ವಸ್ತ್ರಗಳ ಬೇಡಿಕೆ ಹಾಗೂ ಬೆಲೆಯನ್ನು ರಾಕೆಟ್ ವೇಗದಲ್ಲಿ ಹೆಚ್ಚಿಸುತ್ತಿದೆ! ಮಾಜಿ ಪ್ರಧಾನಿ ದಿವಂಗತ ಇಂದಿರಾಗಾಂಧಿಯವರು ಕೂಡ ಈ ಸೀರೆಗಳಿಗೆ ಮಾರು ಹೋಗಿ ತಮ್ಮಲ್ಲಿ ಖರೀದಿಸುತ್ತಿದ್ದರು ಎಂದು ಹೆಮ್ಮೆಯಿಂದ ಜ್ಞಾಪಿಸಿಕೊಳ್ಳುತ್ತಾರೆ ಜನಾರ್ಧನ.

ಸೀರೆಗಳಿಗಾಗಿ ಪ್ರಖ್ಯಾತವಾಗಿದ್ದರೆ, ಕೋಯಾಲ್ ಗುಡಮ್ ತನ್ನ ಫರ್ನಿಶಿಂಗ್ ಬಟ್ಟೆ ಹಾಗೂ ರೇಷ್ಮೆ ಡ್ರೆಸ್ ಮೆಟೀರಿಯಲ್‌ಗಾಗಿ ಹೆಸರುವಾಸಿ! ಇಂದು ಈ 'ಇಕತ್ ವಸ್ತ್ರಗಳು' ಅಮೆರಿಕ, ಜಪಾನ್, ಯೂರೋಪ್ ಮತ್ತು ಆಸ್ಟ್ರೇಲಿಯಾ ದೇಶಗಳಿಗೆ ಕೂಡ ರಫ್ತಾಗುತ್ತಿವೆ.

ಗುಜರಾತಿನ ಪಟೋಲಾ, ಒಡಿಶಾದ ಬಾಂಧನಿ ಹಾಗೂ ತೆಲಂಗಾಣದ ಟೈ ಮತ್ತು ಡೈ ನೇಯ್ಗೆಗಳಲ್ಲಿ ಉಪಯೋಗಿಸಲ್ಪಡುವ ತಾಂತ್ರಿಕತೆ ಒಂದೇ ಆಗಿದ್ದರೂ ತಾಂತ್ರಿಕ ಪರಿಕರಗಳು ಹಾಗೂ ವಿಧಿ ವಿಧಾನದಲ್ಲಿ ವ್ಯತ್ಯಾಸಗಳಿವೆ. ಒಡಿಸ್ಸಾ ಹಾಗೂ ತೆಲಂಗಾಣದಲ್ಲಿ ಪಿಟ್ ಲೂಮುಗಳನ್ನು ಬಳಸಿದರೆ, ಗುಜರಾತಿನ ಪಟೋಲಾ ನೇಕಾರರು 'ಸಿಂಗಲ್' ಹಾರ್ನೆಸ್ ಮಗ್ಗಗಳನ್ನು ಉಪಯೋಗಿಸುತ್ತಾರೆ. ತೆಲಂಗಾಣ 82 ಸೀರೆಗಳಿಗೆ ಸಾಲುವಷ್ಟು ನೂಲನ್ನು ಒಂದೇ ಸಾರಿಗೆ ವಿನ್ಯಾಸಗೊಳಿಸಿದರೆ, ಗುಜರಾತಿನಲ್ಲಿ ಕೇವಲ ಮೂರು ಸೀರೆಗಳಿಗಾಗುವಷ್ಟೇ ನೂಲನ್ನು ವಿನ್ಯಾಸಗೊಳಿಸಲಾಗುವುದು. ಗುಜರಾತಿನಲ್ಲಿ ಗೋಡೆಗಳಿಗೆ ಅಳವಡಿಸಿದ ಬೆಣೆಗಳನ್ನು ಹಾಸು ಹೊಕ್ಕುಗಳಿಗೆ ಉಪಯೋಗಿಸಿದರೆ, ತೆಲಂಗಾಣದಲ್ಲಿ ಅರ್ಧ ಚಂದ್ರಾಕೃತಿಯ 'ಆಸು' ಎಂಬ ಉಪಕರಣವನ್ನು ಇದಕ್ಕಾಗಿ ಬಳಸಲಾಗುತ್ತದೆ.

### ಬಣ್ಣ ಬದುಕಿನ ಬಣ್ಣ!

ಪೋಚಂಪಲ್ಲಿ ಸೀರೆ/ಬಟ್ಟೆಯ ವಿಶಿಷ್ಟತೆ ಎಂದರೆ ವಿನ್ಯಾಸ ಹಾಗೂ ಬಣ್ಣಗಳನ್ನು ನೂಲಿನ ಮೇಲೆ ವರ್ಗಾಯಿಸಿ ನಂತರ ಈ ನೂಲಿನಿಂದ ರಂಗು ರಂಗಿನ ಬಟ್ಟೆಗಳನ್ನು ನೇಯುವುದು. ಈ ವಿನ್ಯಾಸಗಳನ್ನು ನೋಡುವುದೇ ಕಣ್ಣಿಗೊಂದು ಹಬ್ಬ! 'ಬಣ್ಣ ತಡೆದ 'ನೂಲಿನಿಂದ ಅತ್ಯಂತ ನಿಖರವಾಗಿ ಬಟ್ಟೆಯ ಮೇಲೆ ವಿನ್ಯಾಸಗಳನ್ನು ಮೂಡಿಸುವುದು ಇವರ ಸೃಜನಶೀಲತೆಗೆ ಒಂದು ನಿದರ್ಶನ. ಪೋಚಂಪಲ್ಲಿ ಸೀರೆಗಳ ವಿನ್ಯಾಸ ಹಾಗೂ ನೇಯ್ಗೆಗಳು ಸಾಂಪ್ರದಾಯಿಕವಾಗಿದ್ದು ಇತ್ತೀಚಿನ ದಿನಗಳಲ್ಲಿ ನವೀನ ವಿನ್ಯಾಸಗಳನ್ನು ಮೈಗೂಡಿಸಿಕೊಳ್ಳುತ್ತಿವೆ. ಒಂದು ಉತ್ತಮ ವಿನ್ಯಾಸದ ಪೋಚಂಪಲ್ಲಿ ಸೀರೆಯನ್ನು ನೇಯಲು 4 ಜನರು 810 ದಿನಗಳನ್ನು ತೆಗೆದುಕೊಳ್ಳುತ್ತಾರೆ. ನೇಕಾರ ಅವನ ಹೆಂಡತಿ, ತಾಯಿ, ಮಗಳು ಇತ್ಯಾದಿಯಾಗಿ ಕುಟುಂಬದ ಎಲ್ಲ ಸದಸ್ಯರೂ ಈ ನೇಯ್ಗೆಯ ಇತರ ಕಾರ್ಯಗಳಲ್ಲಿ ತೊಡಗಿಕೊಂಡಿರುತ್ತಾರೆ. ಬದುಕು ನೇಯ್ಗೆಯ ಸುತ್ತ ಸುತ್ತುತ್ತಲೇ ಇರುತ್ತದೆ!

ಪೋಚಂಪಲ್ಲಿಯಲ್ಲಿ ಮೂರು ರೀತಿಯಲ್ಲಿ 'ಬಣ್ಣ ತಡೆ' ತಂತ್ರವನ್ನು ಉಪಯೋಗಿಸಿ ಬಣ್ಣವನ್ನು ಹಾಕಲಾಗುತ್ತದೆ. ಹಾಸಿಗೆ ಬಣ್ಣ ಹಾಕುವುದು, ಹೊಕ್ಕಿಗೆ ಬಣ್ಣ ಹಾಕುವುದು ಹಾಸು ಹಾಗೂ ಹೊಕ್ಕುಗಳೆರಡಕ್ಕೂ ಬಣ್ಣ ಹಾಕುವುದು.ಮೊದಲನೇ ಎರಡು ಪ್ರಕಾರಗಳಿಗೆ 'ಸಿಂಗಲ್ ಇಕತ್' ಎಂತಲೂ ಎರಡನೆಯದಕ್ಕೆ 'ಡಬಲ್ ಇಕತ್ ' ಎಂದೂ ಕರೆಯುತ್ತಾರೆ. ವಿನ್ಯಾಸಗಳನ್ನು ರೂಪಿಸಬೇಕಾದ ಕಡೆಗೆ ಬಣ್ಣವನ್ನು ತಡೆಯುವಂತೆ ಗಂಟುಗಳನ್ನು ಹಾಕಲಾಗುತ್ತದೆ. ಬಣ್ಣ ತಡೆಗಾಗಿ ಸೈಕಲ್ ಟ್ಯೂಬಿನ ಕತ್ತರಿಸಿದ ಪಟ್ಟಿಗಳನ್ನು ಉಪಯೋಗಿಸಲಾಗುತ್ತದೆ. ಇವು ಜಲನಿರೋಧಕವಾಗಿದ್ದು, ಪರಿಣಾಮಕಾರಿಯಾಗಿ ಬಣ್ಣಗಳನ್ನು ತಡೆಯುತ್ತದೆ. ಬಣ್ಣ ಹಾಕಿದಾಗ, ಗಂಟುಗಳನ್ನು ಹಾಕಿದ ಸ್ಥಳಗಳಲ್ಲಿ ಬಣ್ಣ ಒಳ ಸೇರಿಕೊಳ್ಳುವುದಿಲ್ಲ.

ಎಲ್ಲ ನೂಲನ್ನು ಬಣ್ಣ ಹಾಕಿದ ನಂತರ ತೆರೆದು, ಟೈಡೈ ಚೌಕಟ್ಟಿನ ಮೇಲೆ ಹರಡಿ ಎರಡನೇ ವಿನ್ಯಾಸಗಳಿಗನುಗುಣವಾಗಿ ಮತ್ತೆ ಬಣ್ಣ ತಡೆಗಾಗಿ ಗಂಟುಗಳನ್ನು ಕಟ್ಟಿ ಬಣ್ಣ ಹಾಕಲಾಗುವುದು. ಬಣ್ಣ ಹಾಕುವ ಪ್ರಕ್ರಿಯೆ ಮುಗಿದ ನಂತರ ಈ ನೂಲನ್ನು ಮತ್ತೊಮ್ಮೆ ಟೈಡೈ ಫ್ರೇಮ್ ಮೇಲೆ ಹರಡಿ ಎಲ್ಲ ಗಂಟುಗಳನ್ನು ಬಿಚ್ಚಲಾಗುವುದು. ಈಗ ನೂಲಿನ ಮೇಲೆ ವಿನ್ಯಾಸ ಸ್ಪಷ್ಟವಾಗಿ ಗೋಚರಿಸುತ್ತದೆ. ಈ 'ಹೊಕ್ಕು' ಈಗ ನೇಯ್ಗೆಗೆ ಸಿದ್ಧ! ಇಂಥ ನೂಲನ್ನು ಮಗ್ಗಕ್ಕೆ ವರ್ಗಾಯಿಸುವಾಗ ನೇಕಾರ ಬಹಳ ಜಾಗ್ರತೆ ವಹಿಸಬೇಕಾಗುತ್ತದೆ. ಸಾಮಾನ್ಯವಾಗಿ ನೈಸರ್ಗಿಕ ಬಣ್ಣಗಳನ್ನು ಇಲ್ಲಿ ಬಳಸಲಾಗುತ್ತದೆ. ಆನೆ, ಗಿಳಿ, ನೃತ್ಯಗಾತಿ, ಹಂಸ, ಹೂಗಳು, ಚೌಕಾಕಾರದ, ವಜ್ರಾಕಾರದ, ಜ್ಯಾಮಿತಿಯ ವಿನ್ಯಾಸಗಳು ಇಲ್ಲಿ ತುಂಬ ಜನಪ್ರಿಯ. ■